ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಮನಾಬಾದ.

ಕ್ರಿ.ಮಿಸ.ನಂ.1566-2023

ಪಿ.ಡಬ್ಲ್ಯೂ-1

ದಿನಾಂಕಃ 16-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ.ಎಸ್.ಎಂ.ಆರ್. ಅರ್ಜಿದಾರರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ ಮತ್ತು ಅದಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ ಮತ್ತು ಸಹಿ ಮಾಡಿರುತ್ತೇನೆ.

ಪಾಟೀ ಸವಾಲು: ಎದುರುದಾರರ ಪರ ಶ್ರೀ.ವಿ.ಕೆ.ಜಿ. ವಕೀಲರಿಂದ:

ಅರ್ಜಿದಾರಳು ನಮ್ಮ ಸಂಬಂಧಿಕರಲ್ಲ, ಆದರೆ ಒಂದೇ ಊರಿನವರು ಇರುತ್ತೇವೆ. ಅರ್ಜಿದಾರಳು ಅವರ ತಂದೆ-ತಾಯಿ ಮನೆಯಲ್ಲಿರುತ್ತಾಳೆ. ಅರ್ಜಿದಾರಳು ಪ್ರಸ್ತುತ ಬಾಡಿಗೆ ಮನೆ ಹಿಡಿದು ಹುಮನಾಬಾದಲ್ಲಿ ವಾಸವಿರುತ್ತಾಳೆ ಎಂದರೆ ಸರಿಯಲ್ಲ. ಹುಮನಾಬಾದಿನ ಯುನಿಕ ಕಂಪ್ಯೂಟರನಲ್ಲಿ ಕೆಲಸ ಮಾಡುತ್ತಾಳೆ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ಪ್ರತಿ ತಿಂಗಳು ರೂ.10,000/- ನೀಡುತ್ತಾರೆ ಎಂದರೆ ಸರಿಯಲ್ಲ. ಮದುವೆಯ ಸಮಯದಲ್ಲಿ ಅರ್ಜಿದಾರಳ ಮನೆಯವರು ಎದುರುದಾರನಿಗೆ ರೂ.2.00 ಲಕ್ಷ ನಗದು ಹಣ & 2 ತೊಲೆ ಬಂಗಾರ ವರದಕ್ಷಿಣೆಯಾಗಿ ನನ್ನ ಸಮಕ್ಷಮಯಾಗಿ ನೀಡಿರುತ್ತಾರೆ. ರೂ.500/- ಮುಖಬೆಲೆಯ ನೋಟುಗಳನ್ನು ನೀಡಿರುತ್ತಾರೆ.

ದಿನಾಂಕ:19.04.2015 ರಂದು ಅರ್ಜಿದಾರಳು & ಎದುರುದಾರರ ಜೊತೆ ಮದುವೆಯಾಗಿರುತ್ತದೆ. ಅರ್ಜಿದಾರಳನ್ನು ಎದುರುದಾರನು ಯಾವುದೇ ಹೆಚ್ಚುವರಿ ವರದಕ್ಷಿಣೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಅರ್ಜಿದಾರಳನ್ನು ಕರೆದುಕೊಂಡು ಹೋಗಲು ಈಗಲು ಸಹ ತಯಾರು ಇರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.72 ರಲ್ಲಿ ವಿಸ್ತೀರ್ಣ 5 ಎಕರೆ 15 ಗುಂಟೆ ಜಮೀನು ಇರುತ್ತದೆ. ಎದುರುದಾರನ ತಂದೆಯ ಹೆಸರಲ್ಲಿರುತ್ತದೆ. ಒಟ್ಟು ಎದುರುದಾರನಿಗೆ 7

ರಿಂದ 8 ಎಕರೆ ಜಮೀನು ಇರುತ್ತದೆ. ಎದುರುದಾರನು ಅವರ ತಂದೆತಾಯಿಗೆ ಒಬ್ಬನೆ ಮಗನಿರುತ್ತಾನೆ. ಅರ್ಜಿದಾರಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜೂನ-2022 ರಂದು ಎದುರುದಾರನು ಅರ್ಜಿದಾರಳನ್ನು ಹೊರಗೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇರುವುದಿಲ್ಲ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.